ತಾಯಿಗಳ ಬಗ್ಗೆ ನಿಮಗೆ ಏಕೆ ಮಾನವೀಯತೆ ದೃಷ್ಟಿ ಬರಲಿಲ್ಲ? ಕೊಲೆಗಾರನ ತಂದೆತಾಯಿಗಳ ಬಗ್ಗೆ ಮಾನವೀಯತೆ ದೃಷ್ಟಿಯನ್ನು ತೋರಿಸಿದಿರಿ ಅವರು ಪಾಪ, ದುಡಿಯುವ ಸ್ವಂತ ಮಗನನ್ನು ಕಳೆದುಕೊಂಡವರಿಗೆ ನ್ಯಾಯ ಸಿಗುತ್ತಿಲ್ಲ ಮಂಚ್ಚಿಡಂವ ಪ್ರಯತ್ನ ನಡೆಯುತ್ತಿದೆ ದಯವಿಟ್ಟು ಕೊಡಬೇಡಿ ಎಂದು ಕೇಳಿದ್ದಾಗ. ನೀವು ಕೋರ್ಟಿನಿಂದ ಏನು ತೀರ್ಮಾನ ಬರಂತ್ತದೆ ಅಲ್ಲಿಯವರೆಗೆ ಕಾಯಬಹುದಿತ್ತು. ಅಧಿಕಾರಿಗಳಿಗೆ ಅಷ್ಟು ಅರ್ಜೆಂಟ್ ಏನಿತ್ತು?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಅಧ್ಯಕ್ಷರೇ, ಅವರನ್ನು ಕರ್ನಾಟಕದಿಂದ ಹೊರಗಡೆ ಕಳಿಸದೇ ಇದ್ದಹಾಗೆ ಇಲ್ಲೇ ಉಳಿಸಿಕೊಳ್ಳಬೇಕೆಂದು ೧೭–೫–೧೯೮೮ ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದಾರೆಂದು ಹೇಳಿದ್ದಾರೆ, ಆದರೆ ಸರ್ಕಾರಿ ಆಜ್ಞೆ ೩–೫–೧೯೮೮ಕ್ಕೆ ಆಯಿತು ಎಂದು ತಿಳಿಸಿದಿರಿ. ಅಂದರೆ ಯಾವ ದಿವಸ ಈತನನ್ನು ಹೊರಗಡೆ ಕಳಿಸಿದ್ದಾರೆ ? ಯಾವ ದಿವಸ ಕರ್ನಾಟಕ ರಾಜ್ಯದಿಂದ ಅಸ್ಸಾಮಿಗೆ ಕಳಿಸಿದರು ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಎರಡನೆಯದು, ಯಾವುದೇ ಮರ್ಡರ್ ಕೇಸ್ ಆದಾಗ ಮಾನವೀಯ ದೃಷ್ಟಿ ಬರುತ್ತದೆ ಎಂದು ಹೇಳಿದರೆ ನಾನು ಅದನ್ನು ಒಪ್ಪುವುದಕ್ಕೆ ಸಾಧ್ಯ ಇಲ್ಲ. ಯಾರು ನಿಜವಾಗಿ ಮರ್ಡರ್ ಮಾ ಡ್ದಾನೆ. ಆತನಿಗೆ ಕಠಿಣವಾದ ಶಿಕ್ಷೆ ಆಗಬೇಕೆನ್ನುವುದು ಪ್ರತಿಯೊಬ್ಬರ ಅಪೇಕ್ಷೆಯಾಗಿರುತ್ತದೆ. ಇಲ್ಲಿ ಮಾನವೀಯ ದೃಷ್ಟಿ ಎಲ್ಲಿ ಬರುತ್ತದೆ? ಹೀಗಿದ್ದೂ ಆತನನ್ನು ಹೊರಗಡೆ ಕಳಿಸಿರತಕ್ಕದ್ದನ್ನು ನೋಡಿದಾಗ ಇದರಲ್ಲಿ ಶಂಕೆಗೆ ಅವಕಾಶ ಆಗುತ್ತದೆ. ಇವರ ಬಗ್ಗೆ ಮಾನವೀಯ ದೃಷ್ಟಿಯನ್ನು ತೋರಿಸಿದ್ದು ಅಷ್ಟು ಸರಿಯಾದುದಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ. ದಯವಿಟ್ಟು ಇಷ್ಟು ಹೇಳಬೇಕು. ಯಾವ ದಿವಸ ಆತನನ್ನು ಅಲ್ಲಿಗೆ ಕಳಿಸಿಕೊಟ್ಟರು? ಮುಖ್ಯಮಂತ್ರಿಗಳ ಆರ್ಡರ್ ೧೭–೫–೧೯೮೮ಕ್ಕೆ ಆಯಿತೆಂದು ಹೇಳುತ್ತಿದ್ದಾರೆ. ೩–೫–೧೯೮೮ಕ್ಕೆ ಸರ್ಕಾರದ ಆರ್ಡರ್ ಆಗಿದೆ. ಈ ಮಧ್ಯ ಯಾವ ತಾರೀಕಿಗೆ ಆತನನ್ನು ಇಲ್ಲಿಂದ ಅಸ್ಸಾಮಿಗೆ ಕಳಿಸಿಕೊಟ್ಟಿದ್ದಾರೆ ಎಂದು ದಯವಿಟ್ಟು ತಿಳಿಸಬೇಕು.

೧೨–೦೦ ಮಧ್ಯಹ್ನ

ಶ್ರೀ ವೀರಣ್ಣ.—ಈ ವಿಷಯದಲ್ಲಿ ಕ್ಲೀನ್ ಆಗಿ ಉತ್ತರದಲ್ಲಿಯೇ ಹೇಳಿದ್ದೇನೆ.

"ಬಳ್ಳಾಡಳಿತ ಕಾರ್ಯದರ್ಶಿ, ದೆಹಲಿ ಆಡಳಿತ, ದೆಹಲಿಯವರು ತಮ್ಮ ಟೆಲಿಕ್ಸ್ ಮೆಸೇಜ್ ದಿನಾಂಕ : ೭–೫–೧೯೮೮ ರಂದು ವಿಚಾರಣಾಧೀನ ಖೈದಿಯನ್ನು ಬೆಂಗಳೂರಿನ ನಿಮ್ಹಾನ್ಸ್‌ನಿಂದ ಚಿಕಿತ್ಸೆಗಾಗಿ ಪೋಲೀಸ್ ಬಂದೋಬಸ್ತಿನಲ್ಲಿ ಏರ್ಪಾಯಿಸಲು ಅನುಮತಿ ಕೊಟ್ಟಿರುತ್ತಾರೆ. ವಿಚಾರಣಾಧೀನ ಖೈದಿ ದೇವಜ್ಯೋತಿ ಬರೂವನನ್ನು ತಾರೀಖಿಂ : ೧೬–೫–೧೯೮೮/೧೭–೫–೧೯೮೮ ರಂದು ಪೋಲೀಸ್ ಬಂದೋಬಸ್ತಿನೊಂದಿಗೆ ದೆಹಲಿಗೆ ಕಳುಹಿಸಿರುವ ಬಗ್ಗೆ ವರದಿ ಬಂದಿರುತ್ತದೆ."

ಈ ರೀತಿಯಾಗಿ ದೆಹಲಿಗೆ ಕಳುಹಿಸಿರುವ ಬಗ್ಗೆ ವರದಿ ಬಂದಿದೆ.

ಗೋಕರ್ಣದಲ್ಲಿ ಅಷ್ಟಬಂಧ ಕಾರ್ಯಕ್ರಮ ನಡೆದಾಗ, ಖರ್ಚು ವೆಚ್ಚ ಮಾಡಿದ ವಿವರಗಳನ್ನು ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ನೀಡದಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಗೋಕರ್ಣದಲ್ಲಿ ಅಷ್ಟಬಂಧ ಕಾರ್ಯಕ್ರಮ ನಡೆದಾಗ ಖರ್ಚು ವೆಚ್ಚ ಮಾಡಿದ ವಿವರಗಳನ್ನು ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ನೀಡದಿರುವ ಬಗ್ಗೆ ಮತ್ತು ಈ ಬಾಬಿಗೆ ಎನ್.ಆರ್.ಇ.ಪಿ, ಹಣವನ್ನು ಖರ್ಚು ಮಾಡಿದ ಬಗ್ಗೆ ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಮತ್ತು ಖಿಷ್ಟಿ ಜಮೀನು ಅಭಿವೃದ್ಧಿ ರಾಜ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ಮತ್ತು ಮಾರುಕಟ್ಟೆ ಮತ್ತು ಖಿಷ್ಟಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನವು ದೇಶದಲ್ಲಿ ಬಹಳ ಪ್ರಸಿದ್ಧಿಯಾಗಿದ್ದು, ಬಹಳ ವರ್ಷಗಳಿಂದ ಇಲ್ಲಿ ಅಷ್ಟಬಂಧ ಕಾರ್ಯಕ್ರಮವು ನಡೆದಿಲ್ಲವಾದ್ದರಿಂದ ಅಷ್ಟಬಂಧ ಕಾರ್ಯಕ್ರಮವನ್ನು ೧೯ನೇ ಮೇ ೧೯೫ ರಿಂದ ೩೦ರ ತನಕ ನಡೆಸಲಾಯಿತು. ಈ ಅಷ್ಟಬಂಧ

ಕಾರ್ಯಕ್ರಮಕ್ಕೆ ದೇಶದ ಎಲ್ಲಾ ಕಡೆಗಳಿಂದ ಭಕ್ತಾಧಿಗಳು ಬರುವ ಸಂಭವ ಇದ್ದುದರಿಂದ, ಭಕ್ತಾಧಿಗಳಿಗೆ ಬೇಕಾಗುವ ಅನುಕೂಲಗಳನ್ನು ಒದಗಿಸುವುದಕ್ಕಾಗಿ ಸರ್ಕಾರವು ದಿನಾಂಕ : ೨೭-೪-೧೯೮೩ರಂದು ಮತ್ತು ೫-೫-೧೯೮೩ರಲ್ಲಿ ಅನುಕ್ರಮವಾಗಿ ರೂ. ೪.೦೦ ಲಕ್ಷ ರೂಪಾಯಿ ಒಟ್ಟು ೮.೦೦ ಲಕ್ಷ ಮತ್ತು ೪.೦೦ ಲಕ್ಷ ರೂಪಾಯಿ (ಎಂಟು ಲಕ್ಷ ರೂಪಾಯಿ ಮಾತ್ರ) ಗಳನ್ನು ಮಂಜೂರು ಮಾಡಿತ್ತು. ಇದರಿಂದ ರೂ. ೨,೯೭,೪೪೪-೦೦ ಗಳನ್ನು ವೆಚ್ಚ ಮಾಡಲಾಗಿದೆ. (ವೆಚ್ಚದ ವಿವರ ಪಟ್ಟಿ ಲಗತ್ತಿಸಿದೆ) ಈ ಬಾಬ್ತು ಉಳಿದ ರೂ. ೫,೦೨,೫೫೬-೦೦ ಗಳನ್ನು ಸರ್ಕಾರಕ್ಕೆ ಸರೆಂಡರ್ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಆಷ್ಟಬಂಧ ಕಾರ್ಯಕ್ರಮ ನಡೆಸಲು ಅನುಕೂಲವಾಗಿ ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಜಿಲ್ಲಾಧಿಕಾರಿಗಳು ಕುಮಟಾ ಉಪವಿಭಾಗದ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯನ್ನು ರಚಿಸಿದ್ದರು. ಜಿಲ್ಲಾಧಿಕಾರಿಗಳು ಆಷ್ಟಬಂಧ ಕಾರ್ಯಕ್ರಮಕ್ಕೆ ಬರುವ ಭಕ್ತಾಧಿಗಳಿಗೆ ತಲಾ ಒಂದು ರೂಪಾಯಿ ಕರವನ್ನು ವಿಧಿಸಿದ್ದರು. ಉತ್ತರ ಕನ್ನಡ ಜಿಲ್ಲಾಧಿಕಾರಿಗಳಿಗೆ ಈ ಸಂಬಂಧದಲ್ಲಿ ಲೆಕ್ಕ ಪತ್ರಗಳನ್ನು ಒದಗಿಸಲು ಒತ್ತಾಯ ಮಾಡಲಾಗಿರುತ್ತದೆ. ಆದರೆ ಉತ್ತರ ಕನ್ನಡ ಜಿಲ್ಲಾಧಿಕಾರಿಗಳು ವ್ಯವಸ್ಥಾಪಕ ಮಂಡಳಿಯವರಿಗೆ ಸಾಕಷ್ಟು ನೋಟೀಸು ಕೊಟ್ಟಿದ್ದಾಗ್ಯೂ ಲೆಕ್ಕಪತ್ರಗಳನ್ನು ಬಂದಿಲ್ಲದ ಕಾರಣ ಪೂರ್ಣ ಲೆಕ್ಕ ಪತ್ರಗಳನ್ನು ಕೊಡಲು ಆಗಿಲ್ಲವೆಂದು ತಿಳಿಸಿದ್ದಾರೆ. ಈ ವಿಚಾರದಲ್ಲಿ ಸಾರ್ವಜನಿಕರಿಂದಲೂ ಅನೇಕ ದೂರುಗಳು ಬಂದಿರುತ್ತವೆ.

ಈ ಆಷ್ಟಬಂಧ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ವಂತಿಗೆ ವಸೂಲಾದ ಹಣದ ಬಗ್ಗೆ ಲೆಕ್ಕ ಪತ್ರಗಳು ಪೂರ್ಣವಾಗಿ ಬಂದಿಲ್ಲದ ಕಾರಣ ಈ ಸಂಬಂಧದಲ್ಲಿ ಸಮಿತಿಗೆ ಸಂಬಂಧಪಟ್ಟ ಸದಸ್ಯರಿಗೆ ನೋಟೀಸ್ ಕೂಡ ಕೊಡಲಾಗಿದೆ. ಲೆಕ್ಕಪತ್ರಗಳನ್ನು ಕೊಡುವಲ್ಲಿ ಬಹಳ ವಿಳಂಬ ಮಾಡಿರುವುದರಿಂದ ಕರ್ನಾಟಕ ಸರ್ಕಾರದ ವತಿಯಿಂದ ಸ್ಪೆಷಲ್ ಆಡಿಟ್ ಮಾಡಿಸುವ ನಿರ್ಣಯ ತೆಗೆದುಕೊಂಡು ಈಗಾಗಲೇ ಸ್ಪೆಷಲ್ ಆಡಿಟ್ ಪ್ರಾರಂಭ ಮಾಡಲಾಗಿದೆ. ಇಷ್ಟರಲ್ಲೇ ಆಡಿಟ್ ವರದಿಯು ಬರುವುದಿದೆ. ಈ ವರದಿಯು ಬಂದ ನಂತರ ಇದರಲ್ಲಿ ಏನಾದರೂ ಅವ್ಯವಹಾರ ಕಂಡು ಬಂದಲ್ಲಿ ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು.

ಈ ಕಾರ್ಯಕ್ರಮದಲ್ಲಿ ೬-೭ ಸಾವಿರ ಜನ ಸರ್ಕಾರಿ ನೌಕರರು ಭಾಗವಹಿಸಿದ್ದರು ಎಂಬುದು ಸರಿಯಲ್ಲ. ಆದರೆ ಸಾರ್ವಜನಿಕರ ಅನುಕೂಲ, ಕಾನೂನು ಪರಿಪಾಲನೆ, ಆರೋಗ್ಯ, ರಸ್ತೆ ಸೌಲಭ್ಯ ಹಾಗೂ ಕುಡಿಯುವ ನೀರಿನ ಸೌಕರ್ಯದ ದೃಷ್ಟಿಯಿಂದ ಸಂಬಂಧಪಟ್ಟ ಇಲಾಖೆಯ ಕೆಲವು ಸಿಬ್ಬಂದಿಯ ಸೇವೆಯನ್ನು ಪಡೆಯಲಾಗಿತ್ತೆಂದು ತಿಳಿದು ಬಂದಿದೆ.

ದಿನಾಂಕ : ೧೫-೫-೧೯೮೩ ರಿಂದ ೩೧-೫-೧೯೮೩ರ ತನಕ ಜರುಗಿದ ಅಷ್ಟಬಂಧ ಕಾರ್ಯಕ್ರಮಕ್ಕಾಗಿ ಸರ್ಕಾರ ನೀಡಿದ ಅನುದಾನ ಮತ್ತು ಖರ್ಚಿನ ವಿವರ.

ಸರ್ಕಾರ ಆದೇಶ ಸಂಖ್ಯೆ ಆರ್‌ಡಿ ೧೫ ಎಂಜಿಐ ೮೧ ದಿನಾಂಕ : ೨೭-೪-೧೯೮೩ ರೂ. ೪.೦೦ ಲಕ್ಷ
ಆರ್‌ಡಿ ೧೫ ಎಂಜಿಐ ೮೧ ದಿನಾಂಕ : ೫-೫-೧೯೮೩ ರೂ. ೪.೦೦ ಲಕ್ಷ
ಒಟ್ಟು ೮.೦೦ ಲಕ್ಷ

ಸಂಖ್ಯೆ

ಖರ್ಚಿನ ವಿವರ

ಅ.ನಂ.	ಜಿಲ್ಲಾಧಿಕಾರಿಗಳ ಆದೇಶ ನಂ. ಮತ್ತು ದಿನಾಂಕ		ಮೊತ್ತ	ಯಾರಿಗೆ ಹಣ ಬಿಡುಗಡೆ ಮಾಡಿತ್ತು	ಉದ್ದೇಶ
೧	ಆರ್‌ಡಿ ಡಿವಿಎಸ್ ಸಿಆರ್ ೫/೮೧-೮೨ ದಿನಾಂಕ ೧೦-೫-೧೯೮೩.		೧,೧೨,೦೦೦,೦೦	ಸಹಾಯಕ ಕಮಿಷನರ್ ಮತ್ತು ಅಷ್ಟಬಂಧ ಮಹೋತ್ಸವ ಸಮಿತಿ ಕಾರ್ಯದರ್ಶಿಗಳು	ಟೆಂಟ್ ಪೆಂಡಾಲ್ ವೆಗೈರೆ ನಿರ್ಮಿಸುವರೇ
೨	–ಅದೇ–	ದಿನಾಂಕ ೩೦-೫-೧೯೮೩	೪೮,೨೪೨–೭೪	–ಅದೇ–	ವಿವಿಧ ಅವಶ್ಯಕ ವೆಚ್ಚಗಳಿಗೆ
೩	–ಅದೇ–	ದಿನಾಂಕ ೨೮-೬-೧೯೮೩	೫೦,೦೦೦–೦೦	–ಅದೇ–	ರಸ್ತೆ ರಿಪೇರಿ ಕೈಗೆತ್ತಿಕೊಂಡ ಟೌನ್ ಪಂಚಾಯ್ತಿ
೪	–ಅದೇ–	ದಿನಾಂಕ ೨೭-೧೨-೧೯೮೩ ೫-೧-೧೯೮೪	೫೪,೬೪೮–೭೪	–ಅದೇ–	ವಿ.ಐ.ಪಿ. ಕಾರ್ ರಿಪೇರಿ ಕುರಿತು
೫	–ಅದೇ–	ದಿನಾಂಕ ೨೩-೩-೧೯೮೪	೧೨,೦೦೦–೦೦	–ಅದೇ–	ವಿ.ಐ.ಪಿ.ಗಳಿಗೆ ೩೦೦ ಕನ್ನಡ ಕೆನ್ನಡ ಸರಬರಾಜು ಮಾಡುವ ಬಗ್ಗೆ
೬	–ಅದೇ–	ದಿನಾಂಕ ೨೯-೩-೧೯೮೪	೧೨,೦೦೦–೦೦	–ಅದೇ–	–ಅದೇ–
೭	–ಅದೇ–	ದಿನಾಂಕ ೧೨-೧-೧೯೮೪	೬೭೯–೦೦	–ಅದೇ–	ದೂರವಾಣಿ ಖರ್ಚು
೮	–ಅದೇ–	ದಿನಾಂಕ ೧೦-೮-೧೯೮೩	೬,೯೯೫–೦೦	–ಅದೇ–	ವಿ.ಐ.ಪಿ. ಕಾರ್ ವಾರ್ತಾ ಮತ್ತು ತಾತ್ಕಾಲಿಕ ಬಸ್ಸು ನಿಲ್ದಾಣದ ಬಗ್ಗೆ.
		ಒಟ್ಟು	೨,೯೭,೬೬೪–೯೮		

ಈ ಬಾಬ್ತಿನಲ್ಲಿ ಉಳಿದ ರೂ. ೫,೦೨,೫೫೫–೦೦ ಗಳನ್ನು ಸರ್ಕಾರಕ್ಕೆ ಸರೆಂಡರ್ ಮಾಡಲಾಗಿದೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಇಲ್ಲಿ ೧೯೫೩ರ ಮೇ ೧೫ರಿಂದ ೩೦ನೇ ತಾರೀಖಿನ ವರೆಗೆ ಅಷ್ಟಬಂಧ ಕಾರ್ಯಕ್ರಮ ನಡೆಸಿದ್ದಾರೆ. ಮಂತ್ರಿಗಳು ಈ ವಿಚಾರದಲ್ಲಿ ಏನು ಹೇಳುತ್ತಿದ್ದಾರೆ ಎಂದರೆ, ಇದರಲ್ಲಿ ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು, ಆಲ್ಲಿನ ವ್ಯವಸ್ಥಾಪಕ ಮಂಡಲಿಯವರಿಗೆ ಸಾಕಷ್ಟು ನೋಟೀಸ್ ಕೊಟ್ಟಿದ್ದಾರ್ಯೂ, ಲೆಕ್ಕಪತ್ರಗಳು ಬಂದಿಲ್ಲದ ಕಾರಣ, ಪೂರ್ಣ ಲೆಕ್ಕಪತ್ರಗಳನ್ನು ಕೊಡಲಾಗಿಲ್ಲವೆಂದು ತಿಳಿಸಿದ್ದಾರೆ. ಈವರೆಗೆ ಎಷ್ಟು ಅವಧಿ ಆಯಿತು ಮತ್ತು ಲೆಕ್ಕಪತ್ರ ಸಮಿತಿಯು ಇತ್ತೀ ಹೇಗೆ ? ಆ ಸಮಿತಿಗೆ ಅಧ್ಯಕ್ಷರು ಯಾರು ಎಂಬುದನ್ನು ಹೇಳಿ.

ಶ್ರೀ ಕೆ. ಅಮರನಾಥಶೆಟ್ಟಿ.—ಉಪ ವಿಭಾಗಾಧಿಕಾರಿಗಳು ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಹಾಗಾದರೆ, ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಮಾಹಿತಿ ಗೊತ್ತಿಲ್ಲ.

ಶ್ರೀ ಕೆ. ಅಮರನಾಥಶೆಟ್ಟಿ.—ನೀವು ಅಧ್ಯಕ್ಷರು ಯಾರೆಂದು ಕೇಳುತ್ತಿದ್ದೀರಿ, ಯಾವ ಸಮಿತಿಗೆ ಎಂದು ನಿಖರವಾಗಿ ಕೇಳಿದರೆ, ನಾನು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಆರ್ಥಿಕ ಸಮಿತಿಗೆ ಅಧ್ಯಕ್ಷರು ಯಾರು ?

ಶ್ರೀ ಕೆ. ಅಮರನಾಥಶೆಟ್ಟಿ.—ಈ ಸಮಿತಿಗೆ ೫-೬ ಸದಸ್ಯರನ್ನು ಮಾಡಿದ್ದೇವೆ. ಜಿ. ಎಸ್. ಹೆಗಡೆ, ಚೇರ್ಮನ್, ಶ್ರೀ ಭಟ್, ಶ್ರೀ ದೀಕ್ಷಿತ್, ಶ್ರೀ ಆರ್. ಎನ್. ಶೆಟ್ಟಿ, ಶ್ರೀ ಕೆ. ಸಿ. ಶೆಟ್ಟಿ, ಕುಮುಟಾ, ಟಿ. ಎನ್. ಹೆಗಡೆ, ಸದಸ್ಯರು ಕುಮಂಟಾ ಉಪ ವಿಭಾಗಾಧಿಕಾರಿ, ಕಾರ್ಯದರ್ಶಿಗಳು.

ಶ್ರೀ ಆರ್. ಎನ್. ನಾಯಕ್.—ಜಿ. ಎಸ್. ಹೆಗಡೆ ಎಂದರೆ ಮುಖ್ಯ ಮಂತ್ರಿಗಳ ಬಂಧು ಗಣೇಶ್ ಹೆಗಡೆ ತಾನೆ ?

ಅಧ್ಯಕ್ಷರು.—ಯಾರ ಬಂಧುಗಳು ಏನು ಇತ್ಯಾದಿ ಇಲ್ಲಿ ಬೇಡ, ಅಲ್ಲಿ ಲೋಪದೋಷ ಏನಾಗಿದೆ, ಹೇಳಿ.

ಶ್ರೀ ಬಿ. ಸ್ವಾಮಿರಾವ್.—ಲೋಪದೋಷಗಳು ಇರುವುದಕ್ಕೇ ಕೇಳುತ್ತಿರುವುದು.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ನನ್ನಿಂದ ತಾವು ಏನು ಅಪೇಕ್ಷೆ ಪಡಬಾರದು ಎಂದರೆ ಸರ್ಕಾರಕ್ಕೆ ಅನುಕೂಲವಾಗುವಂತಹ ಪ್ರಶ್ನೆಗಳನ್ನು ಕೇಳುವಂತಹ ಭಾವನೆ ನನ್ನಲ್ಲಿ ಬರುವ ಹಾಗೆ ತಾವು ಅಪೇಕ್ಷೆ ಪಡಬಾರದು.

ಗಣೇಶ್ ಹೆಗಡೆಯವರು ಆರ್ಥಿಕ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರ ಅಣ್ಣಂದಿರು. ಅವರು ಈ ತನಕ ಲೆಕ್ಕಪತ್ರ ಕೊಡದೇ ಇರುವುದಕ್ಕೆ ಕಾರಣ ಏನು ? ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆ. ಗೋಕರ್ಣದ ಮಹಾಬಲೇಶ್ವರ ದೇವರ ಅಷ್ಟಬಂಧ ಮಾಡಬೇಕಾದರೆ, ಅಲ್ಲಿ ದೇವರ ಸುತ್ತ ಮುತ್ತ ಏನು ಅಗೆಯಬೇಕಾಗಿತ್ತು, ಅಲ್ಲಿ ೬೦-೭೦ ವರ್ಷಗಳ ಹಿಂದಿನಿಂದಲೂ ಮಜ್ರು ವೈಡೂರ್ಯ, ಬೆಳ್ಳಿ ಬಂಗಾರ ಎಲ್ಲವನ್ನೂ ಹಾಕಿದ್ದರು. ಅದನ್ನೆಲ್ಲಾ ಅಗೆದು ತೆಗೆದರು. ಅಲ್ಲಿಂದ ತೆಗೆದಂಥ ಬೆಳ್ಳಿ ಬಂಗಾರಗಳನ್ನು ಎಲ್ಲಿಟ್ಟಿದ್ದೀರಿ ? ಅಲ್ಲಿಗೆ ರಾಜ್ಯದ ವಿವಿಧ ಕಡಗಳಿಂದ ಭಕ್ತಾದಿಗಳು ಬರುತ್ತಿದ್ದರು. ಅವರು ದುಡ್ಡು ಬಂಗಾರ ಪಗ್ಗೆರೆ ಪಗ್ಗೆರೆ ಅಲ್ಲಿ ಹಾಕಿದ್ದರು. ಅಷ್ಟಬಂಧ ಮಾಡಬೇಕಾದರೆ ಅಲ್ಲಿ ಸುತ್ತ ಇದ್ದ ಮಣ್ಣನ್ನು ಅಗೆದು ತೆಗೆದು ಎತ್ತಿ ಹಾಕಿದ್ದರು, ಅದರೊಳಕ್ಕೆ ಭಕ್ತಾದಿಗಳು ದುಡ್ಡನ್ನು ಹಾಕಿದ್ದಾರೆ. ಪ್ರತಿದಿವಸ ಸಾವಿರಾರು ರೂಪಾಯಿ ಸಂಗ್ರಹ ಆಗಿದೆ. ಇದು ೧೫ ದಿವಸ ನಡೆದಿದೆ. ಅದರ ಲೆಕ್ಕವನ್ನು ಯಾವಾಗ ಕೊಡುತ್ತೀರಿ ? ಇದರಲ್ಲಿ ನನ್ನದೇನು ಆಪಾದನೆ ಇದೆ ಎಂದರೆ, ಆವರು ಮಾನ್ಯ ಮುಖ್ಯಮಂತ್ರಿಗಳ ಅಣ್ಣ ಆಗಿದ್ದು ಕೊಂಡು, ಲೆಕ್ಕಪತ್ರ ಕೊಟ್ಟಿಲ್ಲ ಎಂದರೆ, ಅಲ್ಲಿ ಅವ್ಯವಹಾರ ನಡೆದಿದೆ. ಈ ಅವ್ಯವಹಾರ ಗಳನ್ನು ವಿಚಾರಣೆ ಮಾಡುವುದಕ್ಕೆ ತಾವು ಸದನದ ಸಮಿತಿಯನ್ನು ನೇಮಕ ಮಾಡುತ್ತೀರಾ ಹೇಗೆ ? ಅಥವಾ ನ್ಯಾಯಾಂಗ ತನಿಖೆಯನ್ನು ಮಾಡಿಸುತ್ತೀರಾ ಹೇಗೆ ಎಂಬುದನ್ನು ಹೇಳಬೇಕಂ.

ಶ್ರೀ ಕೆ. ಅಮರನಾಥ ಶೆಟ್ಟಿ.—ಈಗಾಗಲೇ ಅದರ ಲೆಕ್ಕ ಕೊಟ್ಟಿಲ್ಲ ಎನ್ನುವುದನ್ನು ಈ ಉತ್ಸವದ ಅಧ್ಯಕ್ಷರಾಗಿದ್ದ ಜಿಲ್ಲಾಧಿಕಾರಿಗಳು ಹೇಳಿದುದರಿಂದ, ಅದಕ್ಕೆ ಸ್ಪೆಷಲ್ ಆಡಿಟರ್ ನೇಮಿಸಿದ್ದೇವೆ. ಸ್ಪೆಷಲ್ ಆಡಿಟರ್‌ರವರ ರಿಪೋರ್ಟ್ ಬಂದಕೂಡಲೇ ಯಾರು ಅವ್ಯವಹಾರ ಮಾಡಿದ್ದಾರೆ ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದೇವೆ.

ಅಧ್ಯಕ್ಷರು.—ಇನ್ನೊಮ್ಮೆ ಕೇಳಿರಿ

ಶ್ರೀ ಎಸ್. ಬಂಗಾರಪ್ಪ.—ಇನ್ನೂ ಮೂರು-ನಾಲ್ಕು ಕೇಳಲಿ.

ಶ್ರೀ ಆರ್. ಎನ್. ನಾಯಕ್.—ಇಷ್ಟು ದಿವಸ ಲೆಕ್ಕಪತ್ರ ಕೊಟ್ಟಿಲ್ಲ ಎಂದರೆ, ಲೆಕ್ಕಪತ್ರವನ್ನು ಸರಿಯಾಗಿ ಇಟ್ಟಿಲ್ಲವಾದ್ದರಿಂದ ದುಡ್ಡನ್ನು ತಿಂದುಹಾಕಿದ್ದಾರೆ ಎಂದು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಇಲ್ಲಿ ಉತ್ತರ ಕೊಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಅಥವಾ ನೀವು ಉತ್ತರ ಕೊಡುವುದಕ್ಕೆ ಮನಸ್ಸು ಮಾಡುತ್ತಿಲ್ಲ. ಉತ್ತರ ಸರಿಯಾಗಿ ಕೊಡಬಾರದು ಎಂದು ಮನಸ್ಸು ಮಾಡಿದ್ದೀರಾ ? ಅವರಿಗೆ ಸಾರ್ವಜನಿಕರ ಹಣವನ್ನು ಪೋಲಂ ಮಾಡುವ ದುರಭ್ಯಾಸ ಇದೆ. ಆ ದುರಭ್ಯಾಸವನ್ನು ತಾವು ಮುಚ್ಚಿಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ. ಇವಕ್ಕೆ ಉತ್ತರ ಕೊಡಿರಿ.

ಶ್ರೀ ಎಸ್. ಬಂಗಾರಪ್ಪ.—ತಿಂದಿಲ್ಲ ಎಂದು ಮಾತ್ರ ಹೇಳುವುದಕ್ಕೆ ಹೋಗಿ ನೀವು ಸಿಕ್ಕಿಹಾಕಿಕೊಳ್ಳಬೇಡಿ.

ಶ್ರೀ ಕೆ. ಆಮರನಾಥ್ ಶೆಟ್ಟಿ.—ದುಡ್ಡನ್ನು ತಿಂದಿದ್ದಾರೆ ಎಂದೂ ಹೇಳುವುದಕ್ಕೆ ಬರುವುದಿಲ್ಲ. ಸ್ಪೆಷಲ್ ಆಡೀಟರ್‌ನ್ನು ನೇಮಕ ಮಾಡಿದ್ದೇನೆ, ಇಮ್ಮಿಡಿಯಟ್ ಆಗಿ ಲೆಕ್ಕಪತ್ರಗಳನ್ನು ಸೀಜ್ ಮಾಡಿದ್ದೇನೆ. ಆಡಿಟ್ ರಿಪೋರ್ಟ್ ಬಂದಕೂಡಲೇ ಅವ್ಯವಹಾರ ಮಾಡಿದವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆ.

ಅಧ್ಯಕ್ಷರು.—ನೆಕ್ಸ್ಟ್ ಕಾಲಿಂಗ್ ಅಟೆನ್‌ಷನ್, ಬಿ. ಲಕ್ಕಪ್ಪನವರೂ.

ಶ್ರೀ ಆರ್. ಎನ್. ನಾಯಕ್.—ಇದು ಇಂಪಾರ್ಟೆಂಟ್ ಮ್ಯಾಟರ್. ಲೆಕ್ಕಾಚಾರ ಕೊಡುವ ವ್ಯವಸ್ಥೆ ಇಲ್ಲ ಎಂದರೆ ಇದನ್ನು ಇಲ್ಲೇ ಬಿಟ್ಟುಬಿಡುತ್ತೇನೆ. ಮೊದಲನೆಯದಾಗಿ ಅಲ್ಲಿ ಹಾಕಿದ ಬೆಳ್ಳಿ, ಬಂಗಾರ, ಪಚ್ಚ, ವೈಢೂರ್ಯ, ಹಣ ಏನೆಲ್ಲಾ ಇತ್ತು ಅದನ್ನೆಲ್ಲಾ ತೆಗೆದು ಎಲ್ಲಿ ಹಾಕಿದ್ದೀರಿ ? ಅದು ಕರ್ನಾಟಕ ರಾಜ್ಯದ ಭಕ್ತರ ದುಡ್ಡು, ಇದು ಮೊದಲನೆಯದು. ಎರಡನೆಯದಾಗಿ ಗಣೇಶ ಹೆಗಡೆಯವರು ಆರ್ಥಿಕ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಮುಖ್ಯಮಂತ್ರಿಗಳ ಅಣ್ಣ, ಆದುದರಿಂದ ಧೈರ್ಯವಾಗಿ ಈ ತನಕ ಲೆಕ್ಕಪತ್ರ ಕೊಡದೇ ಇದ್ದಾರೆಯೇ ಹೇಗೆ ?

ಅಧ್ಯಕ್ಷರು.—ಅಸೆಂಬ್ಲಿಯಲ್ಲಿ ಡಿಟಿಟಿಷನ್ ಮಾಡಬೇಡಿ ಎಂದು ಎಷ್ಟು ಸಲ ಹೇಳುವುದು.

ಶ್ರೀ ಬಿ. ಸ್ವಾಮಿರಾವ್,—ಅಧ್ಯಕ್ಷರೇ, ತಾವು ಏತಕ್ಕೆ ಬೇಜಾರು ಮಾಡಿಕೊಳ್ಳುತ್ತೀರಿ ?

ಶ್ರೀ ಆರ್. ಎನ್. ನಾಯಕ್.—ಇದರಿಂದಾಗಿ ಅವರು ಲೆಕ್ಕಪತ್ರ ಕೊಡದೇ ಇದ್ದಾರೋ ಹೇಗೆ ? ಹಾಗೂ ಸಂಗ್ರಹವಾದ ಹಣವನ್ನು ಎಲ್ಲಿಟ್ಟಿದ್ದೀರಿ ?

ಅಧ್ಯಕ್ಷರು.—ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದ್ದಾರೆ, ನಿಮಗೆ ಸಮರ್ಪಕವಾದ ಉತ್ತರ ಕೊಟ್ಟರೂ ಸಮಾಧಾನ ಇಲ್ಲ.

ಶ್ರೀ ಆರ್. ಎನ್. ನಾಯಕ್.—ಅಷ್ಟಮಿಂಧಕ್ಕೆ ಬರುವ ಭಕ್ತಾದಿಗಳಿಗೆ ಪುಕ್ಕಟೆಯಾಗಿ ಊಟ ಹಾಕಬೇಕೆಂಬ ಉದ್ದೇಶದಿಂದ, ಸಿದ್ದಾಪುರದಿಂದ ಗೋಕರ್ಣಕ್ಕೆ ಮೂರು ಟ್ರಕ್ ಲೋಡ್ ಅಕ್ಕಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಪರ್ಮಿಟ್ ಕೊಡಲಾಗಿತ್ತು. ಅದರ ಜೊತೆಗೆ ಧರ್ಮಸ್ಥಳದ ವೀರೇಂದ್ರ ಹೆಗಡೆಯವರು ಒಂದು ಟ್ರಕ್ ಲೋಡ್ ಅಕ್ಕಿ ಮತ್ತು ತರಕಾರಿಗಳನ್ನು ಕೊಟ್ಟಿದ್ದರು. ಸಿದ್ದಾಪುರದಿಂದ ಮೂರು ಲೋಡ್ ಅಕ್ಕಿ ಬಂದಿದ್ದರೂ ದಾಖಲೆಯಲ್ಲಿ ಒಂದು ಲೋಡ್ ಅಕ್ಕಿ ಬಂದಿದೆ ಎಂದು ಮಾತ್ರ ಇದೆ. ಪರ್ಮಿಟ್ ನೀಡಿದ್ದು ಇನ್ನು ಎರಡು ಲೋಡ್ ಅಕ್ಕಿ ಎಲ್ಲಿ ಹೋಯಿತು ? ಯಾವ ಕಡೆಗೆ ಹೋಯಿತು ಅದನ್ನು ಪತ್ತೆ ಹಚ್ಚಬೇಕು.

ಅಧ್ಯಕ್ಷರು.—ಭಾಷಣ ಮಾಡುತ್ತಿದ್ದೀರಿ ತಾವು ಕ್ವಾರಿಫಿಕೇಷನ್ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಒಂದೇ ಉತ್ತರವನ್ನು ರಿಪೀಟ್ ಮಾಡುತ್ತಿದ್ದಾರೆ ಬೇರೆ ಉತ್ತರ ಕೊಡಿಸಿ.

ಶ್ರೀ ಆರ್. ಎನ್. ನಾಯಕ್.—ಸರ್ಕಾರದವರು ಎಷ್ಟು ಹಣ ಕೊಟ್ಟಿದ್ದಾರೆ ಇದು ಬಹಳ ಮುಖ್ಯವಾದ ವಿಚಾರ. ಇದನ್ನು ಬಿಟ್ಟಿದ್ದಾರೆ. ಎನ್.ಆರ್.ಇ.ಪಿ.ಯ ಹಣ ಎಲ್ಲೆ ಎಷ್ಟು ಖರ್ಚಾ

ಗಿದೆ ಈ ಹಣವನ್ನು ಯಾವ ರೂಲ್ಸ್ ಪ್ರಕಾರ ಖರ್ಚು ಮಾಡಿದ್ದಾರೆ? ಗೋಕರ್ಣದಂತಹ ಮಂಡಲ ಪಂಚಾಯಿತಿ ಏರಿಯಾದಲ್ಲಿ.....

ಅಧ್ಯಕ್ಷರು,—ತಾವು ಮುಕ್ತಾಯ ಮಾಡಿ.

ಶ್ರೀ ಆರ್. ಎನ್. ನಾಯಕ್.—ದುಡ್ಡು ಹೊಡೆದಿರೆಂಬ ಪ್ರಶ್ನೆ ಇದು. ಸಾರ್ವಜನಿಕರ ಹಣ ಪೋಲು ಮಾಡಿರತಕ್ಕಂಥಾದ್ದು ಇದಂ.....

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ನಾನೇನು ಹೇಳುತ್ತೇನೆಂದರೆ ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿ ಬಿಳ್ಳಿ ಆಗಲಿ, ಬಂಗಾರ ಆಗಲಿ ಏನೂ ದುರುಪಯೋಗವಾಗಿಲ್ಲ. ಅವರು ಮಾನ್ಯ ಮುಖ್ಯಮಂತ್ರಿಗಳ ಅಣ್ಣ ಇರಬಹುದು, ದೇಶಪಾಂಡೆ ಇರಬಹುದು, ಬಂಗಾರಪ್ಪ ಇರಬಹುದು, ನಾಯಕ್‌ರವರು ಇರಬಹುದು, ಯಾರೇ ಆಗಲಿ, ಸರ್ಕಾರ ಅದನ್ನು ತನಿಖೆ ಮಾಡಬೇಕಾಗುತ್ತದೆ. ಯಾವ ವ್ಯಕ್ತಿಯ ಹೆಸರನ್ನು ಹೇಳುತ್ತಿದ್ದಾರೆ ಅವರು ಈ ಸದನದಲ್ಲಿ ಇಲ್ಲ. ಅವರು ಹೇಳಿದ್ದನ್ನು ಯಾರು ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೋ, ಅಂತಹವರ ಬಗ್ಗೆ ಮಾನ್ಯ ಸದಸ್ಯರು ಇಲ್ಲಿ ಮಾತನಾಡಲು ಬರುವುದಿಲ್ಲ ಆದರೆ ತಮಗೆ ಅಧಿಕಾರ ಇದೆ ಏಂದು ಅವರು ರೊಕ್ಕ ತಿಂದಿದ್ದಾರೆ, ಹಣ ತಿಂದಿದ್ದಾರೆ ಎಂದು ನೇರವಾಗಿ ಆಪಾದನೆ ಮಾಡುವುದು ತಪ್ಪು. ಲೆಕ್ಕಪತ್ರಗಳನ್ನು ಕೊಡುವ ಜವಾಬ್ದಾರಿ ಅವರದ್ದು ಇಲ್ಲ. ಮಾನ್ಯ ಸದಸ್ಯರು ಇದನ್ನು ತಿಳಿದುಕೊಳ್ಳಬೇಕು. ಆ ಹಣ ಬ್ಯಾಂಕಿನಲ್ಲಿ ಇದೆ. ಲೆಕ್ಕಪತ್ರ ಬೇಕಾದರೆ ತೆಗೆದುಕೊಳ್ಳಬಹುದು. ಈ ಬಗ್ಗೆ ಮಾನ್ಯ ಗಣೇಶ ಹೆಗಡೆಯವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ನಾನು ಸ್ವತಃ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ. ಜಿಲ್ಲಾಧಿಕಾರಿಗಳು ಅವರಿಗೆ ನೋಟೀಸ್ ಕೊಟ್ಟಿದ್ದಾರೆ, ಆದರೆ ಆಡಿಟ್ ಡಿಪಾರ್ಟ್‌ಮೆಂಟಿನವರು ಅವರಿಗೆ ಕೋ-ಆಪರೇಷನ್ ಮಾಡಿಲ್ಲ. ಇದರಲ್ಲಿ ಗಣೇಶ ಹೆಗಡೆಯವರದ್ದು ಏನೂ ಇಲ್ಲ. ಅವರಿಗೆ ಸಂಬಂಧಪಟ್ಟಿಲ್ಲ. ಅವರು ಯಾವ ತರಹದ ಜನ ಎಂದು ಎಲ್ಲರಿಗೂ ಗೊತ್ತು, ಮಾನ್ಯ ಸದಸ್ಯರು ಜವಾಬ್ದಾರಿಯುಳ್ಳವರು ಈ ರೀತಿ ಮಾತನಾಡಿದರೆ ತಪ್ಪಾಗುತ್ತದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಚರ್ಚೆ ಮಾಡಲಿ. ಬೇಕಾದ್ದನ್ನು ನೋಡಿಕೊಳ್ಳಲಿ. ಮಂತ್ರಿಗಳು ಹೇಳಿದ್ದನ್ನು ಚೌಕಾಸಿ ಮಾಡಲಿ ಆದರೆ ಇಲ್ಲಿ ಇಲ್ಲದವರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ.....

ಶ್ರೀ ಆರ್. ಎನ್. ನಾಯಕ್.—ಎಸ್‌ಆರ್‌ಇಪಿ. ದುಡ್ಡನ್ನ ಅಪ್ಪಬಂಧನಕ್ಕೆ ಹೇಗೆ ಖರ್ಚು ಮಾಡಿದರು ?

ಶ್ರೀ ಆರ್. ವಿ. ದೇಶಪಾಂಡೆ.—ನನ್ನ ಮಿತ್ರರು ಇಲ್ಲಿ ಇಲ್ಲದವರ ಮೇಲೆ ನೇರವಾಗಿ ಆಪಾದನೆ ಮಾಡುವುದು ಸರಿಯಲ್ಲ. ತಮಗಿರತಕ್ಕಂಥ ಅಧಿಕಾರವನ್ನು ಉಪಯೋಗಿಸಿಕೊಂಡು ತಾವು ಬೇಕಾದರೆ ಚೌಕಾಸಿ ಮಾಡಿ ಅದನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ ಆಪಾದನೆ ಮಾಡುವುದು ಸರಿಯಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಗಣೇಶ ಹೆಗಡೆಯವರೂ ಸಹ ಪತ್ರ ಬರೆದಿದ್ದಾರೆ. ಲೆಕ್ಕಪತ್ರಗಳನ್ನು ತರಿಸಿ ಎಂದು ಜಿಲ್ಲಾಧಿಕಾರಿಗಳು ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟಿದ್ದಾರೆ. ಫೈಲ್‌ನಲ್ಲಿ ಎಲ್ಲಾ ಇದೆ. ಮಾನ್ಯ ನಾಯಕ್‌ರವರು ಬೇಕಾದರೆ ಹೋಗಿ ನೋಡಲಿ. ವಿಚಾರ ತಿಳಿದುಕೊಳ್ಳಲಿ.

ಶ್ರೀ ಆರ್.ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ನಾಯಕರೇ ಸಾಕು. ಬಿಡಿ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ ನನಗೆ ಬೇಚ್ಚು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕಾಗುತ್ತದೆ. ಇಲ್ಲಿ ಒಂದು ಗೋಕರ್ಣದ ಮಂಡಲ ಪಂಚಾಯಿತಿ.....

ಅಧ್ಯಕ್ಷರು.—ನಾಯಕರೇ ತಾವು ಒಂದು ಕೆಲಸ ಮಾಡಿ. ನಾನು ಗಮನ ಸೆಳೆಯುವ ಸೂಚನೆಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಮಂತ್ರಿಗಳು ಸಮರ್ಪಕವಾಗಿ ಉತ್ತರ ಹೇಳಿದ್ದಾರೆ. ತಪ್ಪಿತಸ್ಥರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇನೆ ಎನ್‌ಕ್ವೈರಿ ಮಾಡಿಸುತ್ತೇನೆ, ಯಾರು ಸಿಕ್ಕಿಹಾಕಿಕೊಳ್ಳುತ್ತಾರೋ ಅವರನ್ನು ಬಲಿ ಹಾಕುತ್ತೇನೆಂದು ಹೇಳಿದ್ದಾರೆ. ಇನ್ನೇನು ಬೇಕು? ತಾವು ಇನ್ನೊಂದು ಕ್ಲಾರಿಫಿಕೇಶನ್ ಮಾತ್ರ ಕೇಳಿ.

ಶ್ರೀ ಆರ್. ಎನ್. ನಾಯಕ್.—ಎನ್‌ಆರ್‌ಇಪಿ ಹಣ ಕೇಂದ್ರ ಸರ್ಕಾರದ್ದು. ಈ ಹಣ ದುರುಪಯೋಗವಾಗಿದೆ, ಮುಂಡಲ ಪಂಚಾಯಿತಿಯವರು ಲಕ್ಷಾಂತರ ರೂಪಾಯಿ ಎನ್‌ಆರ್‌ಇಪಿ. ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶ ಇದೆಯೇ? ಉತ್ತರ ಹೇಳಲಿ ನನಗೆ?

ಅಧ್ಯಕ್ಷರು.—ಬೇರೆ ಜೀರೋಯಂದು ಏತಕ್ಕೆ ಮಾತನಾಡುತ್ತೀರಿ? ಕ್ಲಾರಿಫಿಕೇಶನ್ ಕೇಳಿ. ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ನಾನು ನೇರವಾಗಿ ಕೇಳುತ್ತೇನೆ ಅಧ್ಯಕ್ಷರೇ, ಗೋಕರ್ಣ ಮಂಡಲ ಪಂಚಾಯಿತಿ ಏರಿಯಾದಲ್ಲಿ ಲಕ್ಷಾಂತರ ರೂಪಾಯಿ ಎನ್‌ಆರ್‌ಇಪಿ ಹಣ ಖರ್ಚು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ? ತಾವು ಹೇಳಬೇಕು? ಇನ್ನೊಂದು ನಾನು ಒತ್ತಾಯ ಮಾಡುವುದೇನೆಂದರೆ ಮಾನ್ಯ ದೇಶಪಾಂಡೆಯವರು ಯಾವ ನಿಯಮದ ಪ್ರಕಾರ ಈಗ ಮಾತನಾಡಿದರು?

ಅಧ್ಯಕ್ಷರು.—ತಾವು ನೇರವಾಗಿ ಕ್ಲಾರಿಫಿಕೇಶನ್ ಕೇಳಿ. ನೀವು ವಕೀಲರು ಇದ್ದೀರಿ. ಬುದ್ಧಿವಂತರಿದ್ದೀರಿ. ತುಂಬಾ ಚುರುಕು ಇದ್ದೀರಿ. ನೇರವಾಗಿ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಆರ್.ಎನ್.ನಾಯಕ್.—ನಾನು ಹೆಚ್ಚು ಮಾತನಾಡಿದ್ದೇನೋ ನೀವು ಅಲ್ಲಿ ಕುಳಿತು ಹೆಚ್ಚು ಮಾತನಾಡಿದ್ದೀರೋ ಲೆಕ್ಕಾಚಾರ ಮಾಡಿ. ಯಾವ ನಿಯಮದ ಪ್ರಕಾರ ಮಾನ್ಯ ದೇಶಪಾಂಡೆಯವರು ಈ ವಿಚಾರದಲ್ಲಿ ಮಾತನಾಡಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ.—ನಾನು ಮಂತ್ರಿಯಾಗಿರುವುದರಿಂದ, ಮತ್ತು ನನಗೂ ಜವಾಬ್ದಾರಿ ಇರುವುದರಿಂದ ಮಾತನಾಡುವುದಕ್ಕೆ ಬರುತ್ತದೆ. ಬೇಕಾದರೆ ತಾವು ಕೇಳಿ. ತಾವು ನೇರವಾಗಿ ಮನಸ್ಸಿಗೆ ಬಂದಂತೆ ಆಪಾದನೆ ಮಾಡಿ, ಹುಡುಗಾಟಿಕೆ ಮಾಡುತ್ತಿದ್ದೀರೇನು? ಮಾನ್ಯ ಗಣೇಶ ಹೆಗಡೆಯವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಈ ಆಪ್ತ ಬಂಧನವಾಗಿ ಸುಮಾರು ೬ ತಿಂಗಳಾಯಿತು. ಅವರು ಎಲ್ಲಾ ಕಡೆ ತಿರುಗಿ ಶ್ರಮಪಟ್ಟು ಒಳ್ಳೆಯ ಪವಿತ್ರವಾದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಾನ್ಯ ಸದಸ್ಯರು ಇದರ ಬಗ್ಗೆ ಈ ರೀತಿ ಮಾತನಾಡಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಗಣೇಶ್ ಹೆಗಡೆಯವರಲ್ಲ ಬೇರೆ ಯಾರೇ ಇರಲ್ಲ ತಪ್ಪಿತಸ್ಥರಾಗಿದ್ದರೆ ಅವರ ಮೇಲೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಅದು ಬಿಟ್ಟು ಸಿದ್ದಾಪುರಕ್ಕೆ ಒಂದು ಲೋಡ್ ಅಕ್ಕಿ ಕಳುಹಿಸಿದರು. ಬೆಂಗಳೂರಿಗೆ ಒಂದು ಲೋಡ್ ಅಕ್ಕಿ ಕಳುಹಿಸಿದರು ಏಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ನಾಯಕರೇ ತಾವು ಕುಳಿತುಕೊಳ್ಳಿ. ಕ್ಲಾರಿಫಿಕೇಷನ್ ಮಾತ್ರ ಕೇಳಿ ಎಂದರೆ, ನೀವು ಏನೇನೋ ಕೇಳುತ್ತೀರಿ.

ಶ್ರೀ ಆರ್. ಎನ್. ನಾಯಕ್.—ತಾವು ಜವಾಬ್ದಾರಿ ಜನ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇಷ್ಟೆ ಅಲ್ಲ, ಹೇಳುವುದಕ್ಕೆ ಇನ್ನೂ ಬಹಳ ವಿಷಯ ಇದೆ.

ಶ್ರೀ ಆರ್. ವಿ. ದೇಶಪಾಂಡೆ.—ನಾವು ರಾಜಕೀಯದಲ್ಲಿದ್ದಾಗ ಹೆದರಬಾರದು. ತಪ್ಪು ಯಾರೇ ಮಾಡಿರಲಿ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ತಪ್ಪು ಮಾಡಿದವರನ್ನು ಜನ ಟೀಕೆ ಮಾಡಲೇಬೇಕು.

ಅಧ್ಯಕ್ಷರು.—ನಾಯಕರೇ ನೀವು ಹೆಚ್ಚು ಮಾತನಾಡುವುದು ಬೇಕಾಗಿಲ್ಲ. ಇಲ್ಲಿ ಸ್ವಲ್ಪ ಕೇಳಿ, ನಿಮ್ಮ ಕಾಲಿಂಗ್ ಅಟೆನ್‌ಷನ್‌ಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಒಂದು ಸಾರಿಯಲ್ಲ, ಎರಡು ಸಾರಿಯಲ್ಲ, ಮೂರು ಸಾರಿಯಲ್ಲ ನಾಲ್ಕು ಸಾರಿ ಅವಕಾಶ ಕೊಟ್ಟಿದ್ದೇನೆ. ಯಾರೇ ತಪ್ಪಿತಸ್ಥರಿದ್ದರೂ ಅವರನ್ನು ಬಲಿ ಇಕ್ಕುತ್ತೇವೆಂದು ಅವರು ಹೇಳಿದ್ದಾರೆ. ನಿಮಗೆ ಬೇಕಾದರೆ ಇನ್ನೆಷ್ಟು ದಿನಗಳಲ್ಲಿ ಇದರ ಬಗ್ಗೆ ತನಿಖೆ ಮಾಡಿಸುತ್ತೀರೆಂದು ಕೇಳಿ. ಇಲ್ಲ ಅಂದರೆ, ನಾನು ನಿಮಗೆ ಅವಕಾಶ ಕೊಡುವುದಿಲ್ಲ. ನೆಕ್ಸ್ಟ್ ಕಾಲಿಂಗ್ ಅಟೆನ್‌ಷನ್‌ಗೆ ಹೋಗಬೇಕಾಗುತ್ತದೆ.

ಶ್ರೀ ಆರ್. ಎಸ್. ನಾಯಕ್.—೧೯೫೩ನೇ ಇಸವಿಯಲ್ಲಿ ಇದು ಆಗಿರುವುದು. ಈಗ ೧೯೮೮ನೇ ಇಸವಿ ಇಷ್ಟು ವರ್ಷ ಬೇಕಾ ತನಿಖೆ ಮಾಡುವುದಕ್ಕೆ ? ಇಷ್ಟು ಹೊತ್ತಿಗೆ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಈಗ ನಾನು ಆಪಾದನೆ ಮಾಡುವ ಕೆಲಸವೇ ಬರುತ್ತಿರಲಿಲ್ಲ. ನೀವೂ ಕೂಡ ಇದರ ಬಗ್ಗೆ ಯೋಚನೆ ಮಾಡಬೇಕು ?

ಅಧ್ಯಕ್ಷರು.—ನಾಯಕರೇ ನೀವು ಮುಗಿಸುತ್ತೀರೋ ಇಲ್ಲವೊ ?

(ಕೆಲವು ಮಾನ್ಯ ಸದಸ್ಯರುಗಳು ಒಂದೇ ಸಾರಿ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ನಾನು ಆ ಜಿಲ್ಲೆಗೆ ಜಿಲ್ಲಾ ಉಸ್ತುವಾರಿ ಮಂತ್ರಿ ನಿಜ. ನಾನು ಕಳೆದ ೫ ವರ್ಷಗಳಿಂದ ನೂರಾರು ಸಾರಿ ಆ ಜಿಲ್ಲೆಗೆ ಭೇಟಿ ಕೊಟ್ಟಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಆಗುವ ಕೆಲಸಕಾರ್ಯಗಳ ಬಗ್ಗೆ ಮಾನ್ಯ ಆರ್. ಎಸ್. ನಾಯಕರಿಗೂ ಜವಾಬ್ದಾರಿ ಇದೆ. ೫ ವರ್ಷಗಳಿಂದಲೂ ನೀವು ಸುಮ್ಮನೆ ಇದ್ದು ಈಗ ಏಕೆ ತನಿಖೆಯಾಗಿಲ್ಲವೆಂದು ಕೇಳುತ್ತಿದ್ದೀರಿ ? ಆವತ್ತಿನಿಂದ ಏಕೆ ಸುಮ್ಮನೆ ಇದ್ದಿರಿ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಈ ವಿಷಯದಲ್ಲಿ ಇಂಟರ್‌ಫಿಯರ್ ಆಗಬಾರದೆಂದು ಸುಮ್ಮನೆ ಕುಳಿತುಕೊಂಡಿದ್ದೆ. ಈಗ ನಾನು ಇಂಟರ್‌ಫಿಯರ್ ಆಗಬೇಕಾಗಿದೆ.

ಅಧ್ಯಕ್ಷರು.—ನಾನು ಯಾರಿಗೂ ಮಾತನಾಡುವುದಕ್ಕೆ ಅಲೋ ಮಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಎನ್‌ಕ್ವೈರಿ ಮಾಡುವುದಕ್ಕೆ ೫ ವರ್ಷ ಟೈಮ್ ಬೇಕಾಗಿತ್ತೇ ?

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನನಗೆ ಸಮಾಧಾನ ಇಲ್ಲ. ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಒಂದು ಸದನದ ಸಮಿತಿಯನ್ನು ನೇಮಿಸಿ.

ಶ್ರೀ ಆರ್. ವಿ. ದೇಶಪಾಂಡೆ.—೫ ವರ್ಷಗಳ ಕಾಲ ಡಿಲೇ ಆಗಿದೆಯೆಂದು ಮಾನ್ಯ ಸಚಿವರೇ ಈಗಾಗಲೇ ಹೇಳಿದ್ದಾರೆ. ಈ ಎನ್‌ಕ್ವೈರಿ ಡಿಲೇ ಆಗುವುದಕ್ಕೆ ಯಾರು ಕಾರಣಸಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—೧೯೮೩ರಲ್ಲಿ ಆದ ಘಟನೆ ಬಗ್ಗೆ ೧೯೮೮ನೇ ಇಸವಿಯಲ್ಲಿ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಎನ್‌ಕ್ವೈರಿ ಮಾಡುವುದಕ್ಕೂ ಒಂದು ನೀತಿ ಬೇಡವೇ ? ಮಿತಿ ಬೇಡವೆ ? ಹೋಗಲಿ ಇನ್ನೆಷ್ಟು ವರ್ಷದಲ್ಲಿ ಈ ಎನ್‌ಕ್ವೈರಿಯನ್ನು ಮುಗಿಸುತ್ತೀರಿ ಎಂಬುದನ್ನಾದರೂ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ.—ಎನ್‌ಕ್ವೈರಿ ಮಾಡುವುದು ಏಕೆ ನಿಧಾನವಾಯಿತೆಂಬ ಬಗ್ಗೆ ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ. ತಪ್ಪಿತಸ್ಥರ ಮೇಲೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಎನ್‌ಕ್ವೈರಿಯಾಗುವುದಕ್ಕೆ ಇಷ್ಟು ನಿಧಾನ ಏಕಾಯಿತೆಂದು ಕೇಳಿ. ಆದಕ್ಕೆ ನನಗೆ ಬೇಜಾರಿಲ್ಲ. ಆದರೆ, ಆಪಾದನೆ ಮಾಡುವಾಗ ಜವಾಬ್ದಾರಿಯಿಂದ ಮಾಡಬೇಕೆಂದು ನಾನು ಹೇಳಿದೆ ಅಷ್ಟೆ.

(ಕೆಲವು ಮಾನ್ಯ ಸದಸ್ಯರುಗಳು ಒಂದೇ ಸಾರಿ ಎದ್ದು ನಿಂತು ಮಾತನಾಡುತ್ತಿದ್ದರು.)

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್. ಬಂಗಾರಪ್ಪನವರೇ ತಾವು ಕುಳಿತ್ಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರಾದ ಶ್ರೀ ನಾಯಕ್‌ರವರು ಎರಡು ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಕೇಳಿದ್ದು ಎಂದರೆ, ಎನ್. ಆರ್. ಇ. ಪಿ ಹಣದಲ್ಲಿ ಬೇರೆ ಬಾಬು ಗಳಿಗೆ ಖರ್ಚು ಮಾಡಬಹುದೇ ಎಂದು ಒಂದು. ಅದನ್ನು ಸ್ಪಷ್ಟವಾಗಿ ಕೇಳಿದ್ದಾರೆ, ಎನ್.ಆರ್.ಇ.ಪಿ. ಹಣವನ್ನು ಈ ವಿಷಯಕ್ಕೆ ಖರ್ಚು ಮಾಡತಕ್ಕ ಅವಶ್ಯಕತೆ ಇರಲಿಲ್ಲ. ಆಮೇಲೆ ಎರಡನೆಯದಾಗಿ, ಈ ವಿಷಯದ ಬಗ್ಗೆ ಎನ್‌ಕ್ವೈರಿ ಮಾಡುವುದಕ್ಕೆ ೫ ವರ್ಷ ಬೇಕೆ ? ೫ ವರ್ಷ ಏಕೆ ತೆಗೆದುಕೊಳ್ಳಲಾಯಿತು ? ಇಷ್ಟು ವರ್ಷಗಳ ಕಾಲ ಡಿಲೇ ಆಗಬೇಕಾದರೆ ಇದರ ಹಿಂದೆ ಕಾರಣಕರ್ತರು ಯಾರೆ

ದ್ದಾರೆ ? ಅವರು ಇನ್‌ಫ್ಲೂಯೆನ್ಸ್ ಪರ್ಸನ್ಸ್‌ಗಳೇ ಫ್ಯಾಕ್ಟ್ಸ್. ಸಪ್ಲೈಸ್ ಮಾಡುವುದಕ್ಕೆ ಈ ರೀತಿ ಡಿಲೇ ಮಾಡಲಾಗಿದೆಯೇ ಎಂದು ಕೇಳಿದ್ದಾರೆ.

ಅದಕ್ಕಾಗಿ ತಾವು ದಯವಿಟ್ಟು ಸ್ಪಷ್ಟವಾಗಿ ಹೇಳಿ. ತಮ್ಮ ಅಧ್ಯಕ್ಷತೆಯಲ್ಲಿ ಸದನದ ಒಂದು ಸಮಿತಿಯನ್ನು ಮಾಡಿ ಆ ಕುರಿತು ವಿಚಾರಣೆ ನಡೆಸಿ. ಅಥವಾ ತಾವೇ ಬೇಕಾದರೂ ಅಲ್ಲಿಗೆ ಹೋಗಿ ಬನ್ನಿ. ನಮಗೆ ತಮ್ಮ ಮೇಲೆ ವಿಶ್ವಾಸ ಇದೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಆ ಒಂದು ವಿಷಯದ ಬಗ್ಗೆ ವಿಚಾರಣೆ ಮಾಡುವ ಪ್ರಶ್ನೆ ಇವೊತ್ತು ಇಲ್ಲಿ ಬಂದಿದೆ. ಯಾರೇ ಆದರೂ ಅಂದರೆ ಮಂತ್ರಿಗಳಾಗಿರಲಿ, ಡಿ.ಸಿ. ಯವರಾಗಿರಲಿ, ಎಂಡೋಮೆಂಟ್ ಕಮಿಶನರ್‌ರವರಾಗಿರಲಿ, ಹಣದ ದುರುಪಯೋಗ ಮಾಡಿದ್ದಾರೆ ಎಂದು ಮಂತ್ರಿ ಆ ಬಗ್ಗೆ ವಿಚಾರಣೆ ಮಾಡಿ ಎಂದು ಯಾರೂ ಕೂಡ ಇದುವರೆಗೂ ದೂರು ಕೊಟ್ಟಿಲ್ಲ. ಮಾನ್ಯ ಸದಸ್ಯರು ಈ ವಿಚಾರವನ್ನು ಅಲ್ಲಿ ಭ್ರಷ್ಟಾಚಾರವಾಗಿದೆ, ಹಣ ದುರುಪಯೋಗವಾಗಿದೆ ಎಂದು ಈಗ ಹೇಳುತ್ತಿದ್ದಾರೆ.

ಶ್ರೀ ಎಸ್, ಬಂಗಾರಪ್ಪ.—ಎನ್.ಆರ್.ಇ.ಪಿ.ಗೆ ಇಟ್ಟಿದ್ದನ್ನು ಬೇರೆ ಕಡೆಗೆ ಹಾಕಿದರೆ ಅದರಲ್ಲಿ ಸರಕಾರದ ಜವಾಬ್ದಾರಿ ಇರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ.—ಇವೊತ್ತಿನವರೆಗೆ ಯಾವುದೇ ತರಹದ ದೂರೂ ಕೂಡ ಬಂದಿಲ್ಲ. ಅಲ್ಲಿ ಆ ಕಾರ್ಯಕ್ಕಾಗಿ ಲಕ್ಷಗಟ್ಟಲೆ ಹಣ ಕಲೆಕ್ಟ್ ಆಗಿದೆ, ದಾನಿಗಳು, ಭಕ್ತಾದಿಗಳು ಬೆಳ್ಳಿ ಬಂಗಾರದ ರೂಪದಲ್ಲಿಯೂ ಕೂಡ ಕಾಣಿಕೆ ಸಲ್ಲಿಸಿದ್ದಾರೆ. ಆದರೆ ಇದುವರೆಗೂ ಆ ಬಗ್ಗೆ ಒಂದು ಮಾತನ್ನೂ ಯಾರೂ ಆಡಲಿಲ್ಲ. ಈಗ ಗಣಪತಿ ಹೆಗಡೆ ತಿಂದಿದ್ದಾರೆ ಅನ್ನುವುದು ಹೇಗೆ ?

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ.....

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.—ಹೀಗೆಲ್ಲಾ ತಿಂದು ಬದುಕಲಿಕ್ಕೆ ಆಗುತ್ತದೆಯೇ ? ಅಲ್ಲಿ ದುರುಪಯೋಗವಾಗಿದೆ ಎಂದು ಅವರು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನೀವು ಮಾತನಾಡಿದುದನ್ನು ಮಂತ್ರಿಯವರು ಕೇಳಿದ್ದಾರೆ, ಅದರೆ ಅವರು ಮಾತನಾಡಿದ್ದನ್ನು ನೀವು ಕೇಳುವುದು ಬೇಡವೆ ?

ಶ್ರೀ ಆರ್.ವಿ. ದೇಶಪಾಂಡೆ.—ಅಷ್ಟಬಂಧ ಕಾರ್ಯವನ್ನು ಜರುಗಿಸುವಲ್ಲಿ ಹಣದ ದುರುಪಯೋಗವಾಗಿದೆ ಎಂದು ಇವೊತ್ತಿನವರೆಗೂ ಯಾರು ದೂರು ಕೊಟ್ಟಿಲ್ಲ. ಆದರೆ ಆ ಬಗ್ಗೆ ಅಕೌಂಟ್ಸ್ ಆಡಿಟ್ ಆಗಬೇಕಾಗಿದೆ, ಅದನ್ನು ನೋಡಬೇಕಾಗಿದೆ, ಇದರ ಬಗ್ಗೆ ಡಿಲೇ ಆಗಿದ್ದರೆ ವಿಚಾರಣೆ ಮಾಡುತ್ತೇವೆ ಎಂದು ಸಚಿವರು ಹೇಳಿದ್ದಾರೆ.....

ಶ್ರೀ ಎಸ್. ಬಂಗಾರಪ್ಪ.—ವಿಚಾರಣೆ ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ ?

ಶ್ರೀ ಆರ್.ವಿ. ದೇಶಪಾಂಡೆ.—ಇಷ್ಟರವರೆಗೆ ಯಾರೂ ದೂರು ಕೊಡದಿದ್ದ ಪ್ರಕರಣದ ಬಗ್ಗೆ ಈಗ ಮಾನ್ಯ ನಾಯ್ಕರವರು ಹೇಳುತ್ತಾ ಇದ್ದಾರೆ. ಅಲ್ಲಿ ಹಣದ ದುರುಪಯೋಗ ಆಗಿದೆ ಎಂದು ಹೇಳುತ್ತಿದ್ದಾರೆ. ಸಚಿವರು ವಿಚಾರಣೆ ಮಾಡುವುದಕ್ಕೆ ಒಪ್ಪಿದ್ದಾಗಿದೆ. ಅಕೌಂಟ್ಸ್ ಡಿಲೇ ಆಗುವುದಕ್ಕೆ ಯಾರು ಕಾರಣರು ಎಂದು ನೋಡುವ ಬಗ್ಗೆ ಯಾವ ತಕರಾರೂ ಇಲ್ಲ. ಆದರೆ ತಾವು ಯಾರ ಬಗ್ಗೆ ಆರೋಪ ಮಾಡುತ್ತಿದ್ದೀರಿ, ಅವರು ಈ ಸದನದಲ್ಲಿ ಇಲ್ಲ. ಅವರು ತಮ್ಮನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲ. ಮತ್ತು ಅವಕಾಶವೂ ಇಲ್ಲ. ಅಂತಹವರ ಬಗ್ಗೆ ತಾವು ಇಲ್ಲಿ ಆ ರೀತಿಯಲ್ಲಿ ಹೇಳಬಾರದು. ಮಾನ್ಯ ಬಂಗಾರಪ್ಪನವರು ಗಣಪತಿ ಹೆಗಡೆಯವರ ಮೇಲೆ ಚಾರ್ಜಸ್ ಮಾಡಿದರು. ಆ ಕುರಿತು ರಿಪೋರ್ಟ್ ಬಂತು. ಅದರಲ್ಲಿ ಸಾಬೀತು ಆಗಲಿಲ್ಲ.....

ಶ್ರೀ ಎಸ್. ಬಂಗಾರಪ್ಪ.—ಯಾವುದು ನೀವು ಹೇಳುವ ರಿಪೋರ್ಟ್ ? ಆ ರಿಪೋರ್ಟ್‌ಗೆ ವಿರೋಧ ಪಕ್ಷದವರು ಬಹಿಷ್ಕಾರ ಹಾಕಿದರು. ನೀವೂ ಸಿದ್ದಾಪುರಕ್ಕೆ ಹೋಗಿ ಬನ್ನಿ ಹೋದಾಗ ಗೊತ್ತಾಗುತ್ತದೆ.....

ಶ್ರೀ ಆರ್.ವಿ. ದೇಶಪಾಂಡೆ.—ಹುಬ್ಬಳ್ಳಿಯ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಾ ಇದೆ. ಡಿಲೇ ಆಗುತ್ತಾ ಇದೆ. ಹಿಯರಿಂಗ್ ಆಗುತ್ತಾ ಇಲ್ಲಾ

ಶ್ರೀ ಎಸ್. ಬಂಗಾರಪ್ಪ.—ನೀವೆ ಕೋರ್ಟ್‌ಗೆ ಹೋಗಿ ಕೇಳಿಬನ್ನಿ.....

ಶ್ರೀ ಆರ್.ವಿ. ದೇಶಪಾಂಡೆ.—ತಾವು ಈ ಬಗ್ಗೆ ಕೋ-ಆಪರೇಟ್ ಮಾಡಬೇಕು.....

ಶ್ರೀ ಎಸ್. ಬಂಗಾರಪ್ಪ.—ನನ್ನನ್ನ ಕೋ-ಆಪರೇಟ್ ಮಾಡಿ ಎಂದು ಕೇಳುವುದಕ್ಕೆ ನೀವು ಯಾರು ?.....

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ ಬೇಕು.....

ಶ್ರೀ ಎಸ್. ಬಂಗಾರಪ್ಪ.—ಪ್ರಿವಿಲೇಜ್ ಸಮಿತಿಯ ಮುಂದೆಯೂ ಇದು ಬಂತು..... ಕೋರ್ಟ್ ವಿಚಾರ ತಾವು ಹೇಳ ಬೇಡಿ..... ಏಕೆಂದರೆ ರಿಕಾರ್ಡ್‌ನಲ್ಲಿ ಇದೆ... ..

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಬೇಕು. ಯಾರು ಮಾತನಾಡಿದ್ದೂ ಈಗ ರೆಕಾರ್ಡ್‌ಗೆ ಹೋಗುವುದಿಲ್ಲ. ಅಮರನಾಥಶೆಟ್ಟರೇ ಇಷ್ಟು ದಿವಸದಲ್ಲಿ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿಬಿಡಿ.

ಶ್ರೀ ಕೆ. ಅಮರನಾಥಶೆಟ್ಟಿ.—ಅಧ್ಯಕ್ಷರೇ, ಈಗಾಗಲೇ ೧೫-೧೦-೧೯೮೭ರಲ್ಲಿ ರೆಕಾರ್ಡ್ಸ್‌ನೆಲ್ಲ ಸೀಜ್ ಮಾಡಿಸಿದ್ದೇನೆ, ದಿನಾಂಕ ೨೨-೨-೧೯೮೮ರಲ್ಲಿ ಸ್ಪೆಷಲ್ ಆಡಿಟರ್‌ಗೆ ಎನ್‌ಕ್ವೈರಿ ಮಾಡಲು ಆದೇಶ ಮಾಡಿದ್ದೇನೆ. ದಿನಾಂಕ ೨೧-೩-೧೯೮೮ರಲ್ಲಿ ಎನ್‌ಕ್ವೈರಿ ಕೆಲಸ ಶುರುವಾಗಿದೆ. ಆ ವರದಿ ಬಂದ ಮೇಲೆ ಶಿಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ —ಎಷ್ಟು ದಿವಸದಲ್ಲಿ ಎನ್‌ಕ್ವೈರಿ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೀರಿ ಅನ್ನುವುದು ಹೇಳಿ, ಅದು ಮುಖ್ಯ.

(ಗದ್ದಲ)

ಅಧ್ಯಕ್ಷರು.—ಎನ್‌ಕ್ವೈರಿ ಮಾಡಿಸ್ತೀವಿ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಇದರ ಬಗ್ಗೆ ನೀವೇ ಪ್ರಶ್ನೆ ಕೇಳಿಕೊಳ್ಳಿ, ಸುಮ್ಮನೆ ಮಾಡಿಸುತ್ತಿದ್ದೇನೆ ಎಂದು ಹೇಳಿಬಿಟ್ಟರೆ ಆಯಿತೇ ?

(ಗದ್ದಲ)

ಶ್ರೀ ಆರ್.ವಿ. ದೇಶಪಾಂಡೆ.—ಬೋಫೋರ್ಸ್ ವಿಚಾರಕ್ಕೆ ಎಷ್ಟು ದಿವಸ ತೆಗೆದುಕೊಂಡಿದ್ದೀರಿ ಹೇಳಿ ?

(ಗದ್ದಲ)

ಶ್ರೀ ಎಸ್. ಬಂಗಾರಪ್ಪ.—ಏಂಡಿ ಸೀಟ್ ಸ್ಕ್ಯಾಂಡಲ್ ವಿಚಾರವಾಗಿ ಕೇಳಿಕೊಳ್ಳಿ ? ಸುಮ್ಮನೆ ಕೇಂದ್ರಕ್ಕೆ ಏಕೆ ಹೋಗ್ತೀರಿ, ನಿಮ್ಮ ಎಲೇಲಿ ನೂರು ನೊಣ ಬಿದ್ದಿದೆ.

(ಗದ್ದಲ)

ಅಧ್ಯಕ್ಷರು.— ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ. ಅಮರನಾಥಶೆಟ್ಟಿ.—ಆದಷ್ಟು ಬೇಗ ಮಾಡಿಸುತ್ತೇನೆ. ಸ್ಪೆಷಲ್ ಆಡಿಟರ್‌ರಿಂದ ಬರಲಿ

ಶ್ರೀ ಎಸ್. ಬಂಗಾರಪ್ಪ.—ಏನು ಅದಕ್ಕೆ ಐದು ವರ್ಷ ಬೇಕೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಅಧಿವೇಶನ ಮುಗಿಯುವುದರೊಳಗೆ ಎಂದು ಅವರ ಅರ್ಥ.

ಶ್ರೀ ಎಸ್.ಜಿ. ನಂಜಯ್ಯನ ಪಂಥ.—ಇದು ಸರ್ಕಾರಕ್ಕೆ ಮೋಸ ಮಾಡಿದ್ದಲ್ಲ, ದೇವರಿಗೆ ಮೋಸ ಮಾಡಿದ್ದು ದ್ದು.

(ಗದ್ದಲ)

೩) ತಿಪಟೂರು ತಾಲ್ಲೂಕಿನ ಬೈರಾಪುರದ ಮುಜರಾಯಿಗೆ ಸೇರಿದ ಶ್ರೀ ಕಲ್ಲಾಳಮ್ಮ ದೇವರ ಬಂಗಾರದ ಒಡವೆಗಳನ್ನು ತಾಮ್ರದ ನಕಲಿ ಒಡವೆಗಳನ್ನಾಗಿ ಪರಿವರ್ತಿಸಿರುವುದು

೧೨–೩೦ ಪಿ. ಎಂ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಕನ್ವೀನರ್ ಕೈಬಿಟ್ಟಲ್ಲಿ ತಿಪಟೂರು ತಾಲ್ಲೂಕು ಕಿಬ್ಬನಹಳ್ಳಿ ಹೋಬಳಿ ಬೈರಾಪುರದ ಮುಜರಾಯಿಗೆ ಸೇರಿದ ಶ್ರೀ ಕಲ್ಲಾಳಮ್ಮ ದೇವರ ಸುಮಾರು ಎರಡೂವರೆ ಲಕ್ಷದ ಬೆಲೆ ಬಾಳುವ ಬಂಗಾರದ ಒಡವೆಗಳನ್ನು ತಾಮ್ರದ ನಕಲೀ ಒಡವೆಗಳಾಗಿ ಮಾರ್ಪಡಿಸಿರುವ ಬಗ್ಗೆ ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಆಮರನಾಥಶೆಟ್ಟಿ (ಮುಜರಾಯಿ ಸಚಿವರು).—ತಿಪಟೂರಿನ ತಾಲ್ಲೂಕಿನ ಕಿಬ್ಬನ ಹಳ್ಳಿ ಹೋಬಳಿ ಬೈರಾಪುರದ ಶ್ರೀ ಕಲ್ಲಾಳಮ್ಮ ದೇವಸ್ಥಾನಕ್ಕೆ ಸೇರಿದಂತೆ ಒಟ್ಟು ೮೯ ಬೆಳ್ಳಿ ಬಂಗಾರದ ಒಡವೆಗಳಿರುತ್ತವೆ. ಇದರಲ್ಲಿ ೪೨ ಬೆಳ್ಳಿ ಆಭರಣಗಳು, ೪೭ ಬಂಗಾರದ ಒಡವೆಗಳಾಗಿರುತ್ತವೆ. ಈ ಬಗ್ಗೆ ಬಂದ ದೂರನ್ನು ಪರಿಶೀಲಿಸಲು ತಹಶೀಲ್ದಾರರಿಗೆ ಆದೇಶ ನೀಡಲಾಗಿತ್ತು. ತಹಶೀಲ್ದಾರರು ಸಂಬಂಧಪಟ್ಟವರಿಗೆ ೪ ಸಲ ನೋಟೀಸ್ ಜಾರಿ ಮಾಡಿದರೂ ಕಾರಣಾಂತರಗಳಿಂದ ಅವರು ಹಾಜರಾಗಿರಲಿಲ್ಲ. ಅಂತಿಮವಾಗಿ ದಿನಾಂಕ ೭–೫–೮೮ ರಂದು ಕನ್ವೀನರು ಹಾಜರಾಗಿದ್ದು ಆ ದಿನ ತಹಶೀಲ್ದಾರರು ಕನ್ವೀನರ್‌ರೊಡನೆ ದೇವಸ್ಥಾನಕ್ಕೆ ಭೇಟಿ ಇತ್ತು ಪರಿಶೀಲನೆ ಮಾಡಿರುತ್ತಾರೆ. ಪರಿಶೀಲನೆಯಿಂದ ಕೆಲವು ಬೆಳ್ಳಿ ಹಾಗೂ ಬಂಗಾರದ ಒಡವೆಗಳು ಕಾಣೆಯಾಗಿರುವುದಾಗಿಯೂ ಇನ್ನಿತರ ಕೆಲವುಗಳು ನಕಲಿ ಇರುವುದಾಗಿಯೂ ಹಾಗೂ ಕೆಲವು ಆಭರಣಗಳು ತೂಕದಲ್ಲಿ ವ್ಯತ್ಯಾಸ ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ತಹಶೀಲ್ದಾರರು ಸಂಬಂಧಪಟ್ಟ ಎಲ್ಲರಿಗೂ ಸಮಜಾಯಿಷಿ ಕೇಳಿ ನೋಟೀಸ್ ಜಾರಿ ಮಾಡಿದ್ದಾರೆ. ಈ ಬಗ್ಗೆ ವಿಚಾರಣೆಯನ್ನು ದಿನಾಂಕ ೨೩–೫–೧೯೮೮ ಕ್ಕೆ ಗೊತ್ತುಪಡಿಸಲಾಗಿದೆ.

ವಿವರಗಳು

ಅ) ಕಾಣೆಯಾಗಿರುವ ಬಂಗಾರದ ಒಡವೆಗಳು ಮತ್ತು ಅವುಗಳ ತೂಕ

			ರೂ.	ಪೈ.
೧) ಒಂದು ಬಂಗಾರದ ಗುಂಡಿನ ಸರ	—	ತೂಕ	೨ —	೦
೨) ೧೧ ಬಂಗಾರದ ಚೌಲಿಕಟ್ಟು (ದೊಡ್ಡವು)	—	ತೂಕ	ನಿಗದಿಪಡಿಸಿಲ್ಲ	
೩) ೪ ಬಂಗಾರದ ಬಾವಲಿಗಳು (ಅರಗು ಸಮೇತ)	—	ತೂಕ	೧ —	೦
೪) ಒಂದು ಬಂಗಾರದ ಚೌಲಿ ಬೆಳ್ಳಿಯ ಕಾಲು (ಅಂಗು ಸೇರಿ)	—	ತೂಕ	೩ —	೦
೫) ಬಂಗಾರದ ಕರ್ಣಜ್ವಾಲೆ ಬೆಳ್ಳಿಯ ತಗಡು (ಅರಗು ಸಮೇತ)	—	ತೂಕ	೧ —	೧೦
೬) ನಾಲ್ಕು ಬಂಗಾರದ ಕಣ್ಣು ಕಂಕಣ	—	ತೂಕ	೨ —	೦
೭) ಬಂಗಾರದ ಕರ್ಣಜ್ವಾಲೆ ತಾಮ್ರದ ತಗಡು	—	ತೂಕ	೧೫ —	೦
೮) ಚಿಕ್ಕಮ್ಮ ಮೆರವಣಿಗೆ ವಿಗ್ರಹದ ಬಂಗಾರದ ಒಂದೆಳೆ ಗುಂಡಿನ ಸರ, ತಾಳಿ ಸರ, ಒಂದು ಬಂಗಾರದ ಚಂದ್ರನೆಲೆ, ಒಂದು ಮೂಗುತಿ	—	ತೂಕ	೭ —	೦